ಕಲ್ಲಿದ್ದಲು ಶಾಖೋತ್ಪನ ಕೇಂದ್ರದ ಸ್ಥಾಪನೆ ಬಗ್ಗೆ

೭೬೯. ಶ್ರೀ ಯು. ಭೂಪತಿ (ಸಂಡೂರು)—ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳ ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬಳ್ಳಾರಿ ಜಿಲ್ಲೆಯ ತೋರಣಗಲ್ಲು ಹತ್ತಿರ ಕಲ್ಲಿದ್ದಲು ಶಾಖೋತ್ಪನ್ನ ಕೇಂದ್ರ ಸ್ಥಾಪನೆಗೆ ಯೋಜನೆಯೊಂದು ಇರುವುದು ನಿಜವೆ ?

ಆ) ಈ ಶಾಖೋತ್ಪನ್ನ ಕೇಂದ್ರಕ್ಕೆ ಬೇಕಾಗಿರುವ ಸ್ಥಳ ನೀರು ಇತರ ಖಚ್ಚಾ ವಸ್ತುಗಳ ಅನುಕೂಲಗಳಿವೆಯೇ ?

ಇ) ಈ ಯೋಜನೆಯು ಈಗ ಯಾವ ಹಂತದಲ್ಲಿದೆ ?

ಶ್ರೀ ಲಕ್ಷ್ಮಿನರಸಿಂಹಯ್ಯ (ವಿದ್ಯುತ್ ರಾಜ್ಯ ಮಂತ್ರಿಗಳು)—

ಅ) ಬಳ್ಳಾರಿ ಜಿಲ್ಲೆಯ ಹೊಸಪೇಟೆ ತೋರಣಗಲ್ಲು ಹತ್ತಿರ ಶಾಖೋತ್ಪನ್ನ ಕೇಂದ್ರ ಸ್ಥಾಪನೆಯ ಬಗ್ಗೆ ಪರಿಶೀಲನೆ ಮಾಡಲಾಗುತ್ತಿದೆ.

ಆ ಮತ್ತು ಇ) ಇದಕ್ಕೆ ಬೇಕಾಗುವ ನೀರು, ಕಲ್ಲಿದ್ದಲು ಮತ್ತು ಸ್ಥಳದ ಬಗ್ಗೆ ಪರಿಶೀಲನೆ ಮಾಡಲಾಗುತ್ತಿದೆ.

ದಾವಣಗೆರೆಯಲ್ಲಿ ಮುಚ್ಚಿರುವ ಹತ್ತಿ ಗಿರಣಿಗಳನ್ನು ಪುನಃ ಪ್ರಾರಂಭಿಸುವ ಬಗ್ಗೆ

೭೭೧. ಶ್ರೀ ಪಂಪಾಪತಿ (ದಾವಣಗೆರೆ)—ಮಾನ್ಯ ಭಾರಿ ಮಂತ್ರಿ ಮತ್ತು ಮಧ್ಯಮ ಕೈಗಾರಿಕೆಗಳ ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದಾವಣಗೆರೆಯಲ್ಲಿ ಮುಚ್ಚಿರುವ ಹತ್ತಿ ಗಿರಣಿಗಳನ್ನು ಪುನಃ ಪ್ರಾರಂಭಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಕೆ. ಹೆಚ್. ಪಟೇಲ್ (ಕೈಗಾರಿಕೆ ಮತ್ತು ವಿದ್ಯುತ್ ಸಚಿವರು)—

ಅ) ದಾವಣಗೆರೆಯಲ್ಲಿ ಮುಚ್ಚಿರುವ ಈ ಕೆಳಕಂಡ ನಾಲ್ಕು ಹತ್ತಿಗಿರಣಿಗಳನ್ನು ಪುನಃ ಪ್ರಾರಂಭಿಸಲು ಸರ್ಕಾರ ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ,

೧. ಶ್ರೀ ಗಣೇಶರ್ ಹತ್ತಿಗಿರಣಿ :

ಗಣೇಶರ್ ಹತ್ತಿಗಿರಣಿಯು ಬೋರ್ಡ್ ಆಫ್ ಇಂಡಸ್ಟ್ರಿಯಲ್ ಅಂಡ್ ಫೈನಾನ್ಸಿಯಲ್ ರಿಕನ್ಸ್ಟ್ರಕ್ಷನ್ (ಬಿ.ಐ.ಎಫ್.ಆರ್) ಸಂಸ್ಥೆಗೆ ಅರ್ಜಿ ಹಾಕಿ ಕೆಲವು ರಿಯಾಯಿತಿ ಪರಿಹಾರಗಳನ್ನು ಕೊಡ ಬೇಕೆಂದು ಪ್ರಾರ್ಥಿಸಿದಾಗ ಆ ಸಂಸ್ಥೆಯಿಂದ ನೇಮಕಗೊಂಡ ಐ.ಡಿ.ಬಿ.ಐ. ಸಂಸ್ಥೆಯು ಶ್ರೀ ಗಣೇಶರ್ ಹತ್ತಿಗಿರಣಿಯ ಪುನರುಜ್ಜೀವನಕ್ಕೆ ಒಂದು ಸಮಗ್ರ ರಿಯಾಯಿತಿಯ ವ್ಯವಸ್ಥೆಯನ್ನು ತಯಾರಿಸಿದೆ. ಈ ರಿಯಾಯಿತಿಗಳನ್ನು ನೀಡುವ ವಿಷಯವನ್ನು ಈಗಿರುವ ನಿಯಮ ಹಾಗೂ ರದ್ದತಿಗಳಿಗನುಸಾರವಾಗಿ ಪರಿಶೀಲಿಸಲಾಗುತ್ತಿದೆ. ಅನಂತರ ಸಚಿವ ಸಂಪುಟದ ಒಪ್ಪಿಗೆಗೆ ಇಡಲಾಗುವುದು.